ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ವಿಶ್ವಜಿತ್ ಶೆಟ್ಟಿ

ದಿನೇಶ್ ಮತ್ತು ಇತರರು ವಿರುದ್ಧ ರಾಜ್ಯ, ನರೋನ ಪೊಲೀಸ್ ಠಾಣೆ ಮೂಲಕ

ಕ್ರಿಮಿನಲ್ ಅರ್ಜಿಸಂಖ್ಯೆ: 200181/2021,ದಿನಾಂಕ: 16 ನೇ ಫೆಬ್ರುವರಿ, 2021.

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಸ್. ವಿಶ್ವಜಿತ್ ಶೆಟ್ಟಿ:

1. ಐಪಿಸಿಯ 34 ನೇ ಪ್ರಕರಣದೊಂದಿಗೆ ಓದಲಾದ 302, 201 ನೇ ಪ್ರಕರಣಗಳ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಗೆ ದಾಖಲಿಸಲಾದ, ಕಲಬುರಗಿಯ I ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ಕಡತದಲ್ಲಿ ಇತ್ಯರ್ಥದಲ್ಲಿರುವ ಎಸ್.ಸಿ.ಸಂಖ್ಯೆ:239/2017 ರಲ್ಲಿ 1 ಮತ್ತು 3 ನೇ ಆಪಾದಿತರಾದ ಅರ್ಜಿದಾರರು, ಮುಖ್ಯವಾಗಿ, ಮೊಕದ್ದಮೆಯನ್ನು ಈಗಾಗಲೇ ತೀರ್ಪಿಗಾಗಿ ರವಾನಿಸಿರುವುದರಿಂದ ಮಾನ್ಯ ಸೆಷನ್ಸ್ ನ್ಯಾಯಾಧೀಶರು 'ಸಿಆರ್‌ಪಿಸಿ'ಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲವೆಂಬ ಕಾರಣದ ಮೇಲೆ, ಸಿಆರ್‌ಪಿಸಿ'ಯ 311 ನೇ ಪ್ರಕರಣದ ಅಡಿಯಲ್ಲಿ ಸದರಿ ನ್ಯಾಯಾಲಯವು ತನ್ನ ಅಧಿಕಾರವನ್ನು ಚಲಾಯಿಸಿ ಹೊರಡಿಸಿದದಿನಾಂಕ: 06.01.2021 ರ ಆದೇಶವನ್ನು ಪ್ರಶ್ನಿಸಿದ್ದಾರೆ.

2. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳೆಂದರೆ, ಶಿವರಾಜ್ ಎಸ್. ಮಾಲಿಪಾಟೀಲ್ ಎಂಬುವವರು ನೀಡಿದ ದೂರಿನ ಆಧಾರದ ಮೇಲೆ ಕಲಬುರಗಿಯ ಅಳಂದ್ ಸರ್ಕಲ್, ನರೋನ ಪೊಲೀಸರು ' ಐಪಿಸಿ'ಯ 302, 201 ನೇ ಪ್ರಕರಣಗಳ 9 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗಾಗಿ ಅಪರಿಚಿತ ವ್ಯಕ್ತಿಗಳ ವಿರುದ್ಧ ಅಪರಾಧಸಂಖ್ಯೆ: 102/2017 ರಲ್ಲಿ ಪ್ರಕರಣ ದಾಖಲಿಸಿದರು ಮತ್ತು ಆ ತರುವಾಯ, ' ಐಪಿಸಿ'ಯ 34 ನೇ ಪ್ರಕರಣದೊಂದಿಗೆ ಓದಲಾದ 302, 201 ನೇ ಪ್ರಕರಣಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗಾಗಿ, ಇದರಲ್ಲಿನ ಅರ್ಜಿದಾರರ ವಿರುದ್ಧ ಸದರಿ ಪ್ರಕರಣದಲ್ಲಿ ಆರೋಪಪಟ್ಟಿಯನ್ನು ಸಲ್ಲಿಸಲಾಗಿದೆ.ಆರೋಪಪಟ್ಟಿ ಸಲ್ಲಿಸಿದ ನಂತರ, ಎ ಎಸ್.ಸಿ.ಸಂಖ್ಯೆ:239/2017 ರಲ್ಲಿ ಕಲಬುರಗಿಯ I ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಆಪಾದಿತ ಅಪರಾಧಗಳಿಗಾಗಿ ಆಪಾದಿತರನ್ನು ಅಧಿವಿಚಾರಣೆ ಮಾಡಲಾಗಿದೆ.ಸದರಿ ಮೊಕದ್ದಮೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿದ್ದು ಪೂರ್ಣವಾದ ನಂತರ, ಮಾನ್ಯ ಸೆಷನ್ಸ್ ನ್ಯಾಯಾಧೀಶರು ಎರಡೂ ಕಡೆಯವರ ವಾದಗಳನ್ನು ಆಲಿಸಿರುತ್ತಾರೆ ಮತ್ತು ಆ ನಂತರ ವಿಷಯವನ್ನು ತೀರ್ಪಿಗಾಗಿ ಕಳಿಸಿರುತ್ತಾರೆ.ಆ ಹಂತದಲ್ಲಿ, ಮಾನ್ಯ ಸೆಷನ್ಸ್ ನ್ಯಾಯಾಧೀಶರು ' ಸಿಆರ್‌ಪಿಸಿ'ಯ 311 ನೇ ಪ್ರಕರಣದ ಅಡಿಯಲ್ಲಿ ತಮ್ಮ ಅಧಿಕಾರವನ್ನು ಸ್ವ-ಪ್ರೇರಣೆಯಿಂದ ಚಲಾಯಿಸಿ,ದಿನಾಂಕ: 06.01.2021 ರ ಪ್ರಶ್ನಿತ ಆದೇಶವನ್ನು ಹೊರಡಿಸಿರುತ್ತಾರೆ.

3. ಮೊಕದ್ದಮೆಯನ್ನು ಈಗಾಗಲೇ ತೀರ್ಪಿಗಾಗಿ ರವಾನಿಸಿರುವುದರಿಂದಾಗಿ, ಮಾನ್ಯ ಸೆಷನ್ಸ್ ನ್ಯಾಯಾಧೀಶರು ' ಸಿಆರ್‌ಪಿಸಿ ' ಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ಚಲಾಯಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲವೆಂದು ಅರ್ಜಿದಾರರ ಪರ ಮಾನ್ಯ ವಕೀಲರು ನಿವೇದಿಸಿದ್ದಾರೆ.ಸದರಿ ಅಧಿಕಾರವನ್ನು ಅಧಿವಿಚಾರಣೆಯ ಹಂತದಲ್ಲಿ ಮಾತ್ರ ಚಲಾಯಿಸಬಹುದು.ಮಾನ್ಯ ಸೆಷನ್ಸ್ ನ್ಯಾಯಾಧೀಶರು ಎರಡೂ

ಪಕ್ಷಕಾರರ ವಾದಗಳನ್ನು ಆಲಿಸಿದ್ದು, ಆ ನಂತರ, ' ಸಿಆರ್‌ಪಿಸಿಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಪಡೆಯಲು ಸಾಧ್ಯವಾಗಲಿಲ್ಲ.ಏಕೆಂದರೆ, ಅದು ಪ್ರಾಸಿಕ್ಯೂಷನ್ ಪ್ರಕರಣದಲ್ಲಿನ ಕೊರತೆಯನ್ನು ತುಂಬುವುದಕ್ಕೆ ಸಮಾನವಾಗುತ್ತದೆ ಎಂದು ಅವರು ನಿವೇದಿಸುತ್ತಾ ಅವರು ಅರ್ಜಿಯನ್ನು ಪುರಸ್ಕರಿಸಲು ಕೋರಿದ್ದಾರೆ.

4. ಅರ್ಜಿದಾರರ ಪರ ಮಾನ್ಯ ವಕೀಲರು ಕೆ. ಸಜೀಂದ್ರನ್ ವಿರುದ್ಧ ಕಾರ್ಯದರ್ಶಿ, ತಲಕುಲತೂರ್ ಗ್ರಾಮ ಪಂಚಾಯತ್ ' ಮೊಕದ್ದಮೆಯಲ್ಲಿ ಕೇರಳದ ಉಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.ಸದರಿ ತೀರ್ಪಿನ 5, 6 ಚ ಮತ್ತು 8 ನೇ ಕಂಡಿಕೆಗಳಲ್ಲಿ, ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

“5. ಈ ಸಂಬಂಧ, ' ಸಿಆರ್‌ಪಿಸಿ'ಯ 311 ನೇ ಪ್ರಕರಣವನ್ನು ಉಲ್ಲೇಖಿಸುವುದು ಸೂಕ್ತವಾಗಿದೆ.

' ಮುಖ್ಯ ಸಾಕ್ಷಿಯನ್ನು ಸಮನ್ ಮಾಡುವ ಅಥವಾ ಹಾಜರಿರುವ ವ್ಯಕ್ತಿಯನ್ನು ವಿಚಾರಣೆ ಮಾಡುವ ಅಧಿಕಾರ:

” ಯಾವುದೇ ನ್ಯಾಯಾಲಯವು, ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯ ಯಾವುದೇ ಹಂತದಲ್ಲಿ, ಯಾರೇ ವ್ಯಕ್ತಿಯನ್ನು ಸಾಕ್ಷಿಯಾಗಿ ಸಮನ್ ಮಾಡಬಹುದು ಅಥವಾ ಹಾಜರಿರುವ ಯಾರೇ ವ್ಯಕ್ತಿಯನ್ನು, ಅವನನ್ನು ಸಾಕ್ಷಿಯಾಗಿ ಸಮನ್ ಮಾಡಿಲ್ಲದಿದ್ದರೂ ವಿಚಾರಣೆ ಮಾಡಬಹುದು ಅಥವಾ ಈಗಾಗಲೇ ವಿಚಾರಣೆ ಮಾಡಲಾಗಿರುವ ಯಾರೇ ವ್ಯಕ್ತಿಯನ್ನು, ಪುನ:ಕರೆಯಿಸಬಹುದು ಮತ್ತು ಪುನ:ವಿಚಾರಣೆ ಮಾಡಬಹುದು ಮತ್ತು ನ್ಯಾಯಾಲಯವು, ಅಂಥ ಯಾರೇ ವ್ಯಕ್ತಿಯನ್ನು, ಅವನ ಸಾಕ್ಷ್ಯವು ಮೊಕದ್ದಮೆಯ ನ್ಯಾಯಸಮ್ಮತ ನಿರ್ಣಯಕ್ಕೆ ಅಗತ್ಯವೆಂದು ಕಂಡುಬಂದರೆ, ಸಮನ್ ಮಾಡತಕ್ಕದ್ದು ಮತ್ತು ವಿಚಾರಣೆ ಮಾಡತಕ್ಕದ್ದು ಅಥವಾ ಪುನ:ಕರೆಯತಕ್ಕದ್ದು ಮತ್ತು ಪುನಃ ವಿಚಾರಣೆ ಮಾಡತಕ್ಕದ್ದು.” (ಒತ್ತು ನೀಡಲಾಗಿದೆ)

ಆದುದರಿಂದ, ಈ ಅಧಿಕಾರವನ್ನು ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ಪ್ರಕ್ರಿಯೆಗಳ ಯಾವುದೇ ಹಂತದಲ್ಲಿ ಮಾತ್ರ ” ಚಲಾಯಿಸಬಹುದಾಗಿದೆ.ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಗಳನ್ನು ಪ್ರಕರಣದಲ್ಲಿ ಪರ್ಯಾಯವಾಗಿ ಉಲ್ಲೇಖಿಸಲಾಗಿದೆ.ಅ ೦ ಗೀಕರಿಸಲಾದ ೦ ತೆ, ಇದೊ ೦ ದು ಅಧಿವಿಚಾರಣಾ ಪ್ರಕರಣವಾಗಿತ್ತು.ಪ್ರಕರಣವು, ಇತರ ಪ್ರಕ್ರಿಯೆಗಳನ್ನು ವಿಚಾರಣೆ ಮತ್ತು ಅಧಿವಿಚಾರಣೆಗಿಂತ ಭಿನ್ನವಾಗಿ ಪರ್ಯಾಯವಾಗಿ ನಮೂದಿಸಿದಾಗ, ' ಇತರ ಪ್ರಕ್ರಿಯೆಗಳು ' ಎಂಬುದು ಅಧಿವಿಚಾರಣೆಯನ್ನು ಹೊರತುಪಡಿಸಿ, ” ವ್ಯವಹರಣೆಗಳು ” ಆಗಿರಬೇಕು.ಅಂಗೀಕರಿಸಲಾದ ೦ ತೆ, ಅಲ್ಲಿ ಅಧಿವಿಚಾರಣೆ ನಡೆಸಲಾಗಿತ್ತು ಮತ್ತು ಸಾಕ್ಷಿಗಳನ್ನು ವಿಚಾರಣೆ ಮಾಡಲಾಗಿದೆ ಹಾಗೂ ಪ್ರಕರಣವನ್ನು ತೀರ್ಪಿಗಾಗಿ ರವಾನಿಸಲಾಗಿದೆ.

6. ದಂಡ ಪ್ರಕ್ರಿಯಾ ಸಂಹಿತೆಯ 353 ( 1) ನೇ ಪ್ರಕರಣವು ತೀರ್ಪನ್ನು ಕುರಿತು ಮಾತನಾಡುತ್ತದೆ.

353. (1) ಮೂಲ ಅಧಿಕಾರವ್ಯಾಪ್ತಿಯುಳ್ಳ ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿನ ಪ್ರತಿಯೊಂದು ಅಧಿವಿಚಾರಣೆಯ ತೀರ್ಪನ್ನು,

ಅಧಿವಿಚಾರಣೆಯು ಮುಕ್ತಾಯವಾದ ಕೂಡಲೇ ಅಥವಾ ಅನಂತರ ಯಾವುದೇ ಸಮಯದಲ್ಲಿ ಪಕ್ಷಕಾರರಿಗೆ ಅಥವಾ ಅವರ ಫೀಡರ್ಗೆ ಅದರ ಬಗ್ಗೆ ನೋಟೀಸನ್ನು ಕೊಟ್ಟು:

( ಎ) ತೀರ್ಪನ್ನು ಪೂರ್ಣವಾಗಿ ಹೇಳುವ ಮೂಲಕ; ಅಥವಾ

(ಬಿ) ತೀರ್ಪನ್ನು ಪೂರ್ಣವಾಗಿ ಓದುವ ಮೂಲಕ; ಅಥವಾ

(ಸಿ) ತೀರ್ಪಿನಲ್ಲಿರುವ ಜಾರಿಗೊಳಿಸಬೇಕಾದ ಭಾಗವನ್ನು ಓದುವ ಮೂಲಕ ಮತ್ತು ಆಪಾದಿತನಿಗೆ ಅಥವಾ ಅವನ ಫೀಡರ್ಗೆ ಅರ್ಥವಾಗುವ ಭಾಷೆಯಲ್ಲಿ ತೀರ್ಪಿನ ಸಾರಾಂಶವನ್ನು ವಿವರಿಸುವ ಮೂಲಕ,

ಪ್ರಿಸೈಡಿಂಗ್ ಅಧಿಕಾರಿಯು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸತಕ್ಕದ್ದು."

ಆದುದರಿಂದ ಅಧಿವಿಚಾರಣೆಯು ಮುಕ್ತಾಯವಾದ ಮೇಲೆ ತೀರ್ಪಿನ ಹಂತ ಬರುತ್ತದೆ.ಅಧಿವಿಚಾರಣೆಯ ಮುಕ್ತಾಯದ ನಂತರ ಕೂಡಲೇ ಅಥವಾ ಅದಕ್ಕಾಗಿ ನೀಡಿರಬಹುದಾದ ದಿನಾಂಕದ ತರುವಾಯ ತೀರ್ಪು ಬರಬಹುದು ಮತ್ತು ಪ್ರಕರಣವನ್ನು ಹಾಗೆ ರವಾನಿಸಲಾಗಿದೆ.ಆದುದರಿಂದ, ಪ್ರಕರಣವನ್ನು ತೀರ್ಪಿಗಾಗಿ ಕಳುಹಿಸಿದಾಗ, ಅಧಿವಿಚಾರಣೆಯೂ ಕೊನೆಗೊಳ್ಳುತ್ತದೆ.

7. XXXX ಕರ್ನಾಟಕ ತೀರ್ಪುಗಳ ವರದಿ 2021

8. ಈಗಾಗಲೇ ಉಲ್ಲೇಖಿಸಲಾದಂತೆ, " ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯ ಯಾವುದೇ ಹಂತದಲ್ಲಿ " ಸಂಹಿತೆಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಬಹುದು.ಇತರ ವ್ಯವಹರಣೆಯು ಅಧಿವಿಚಾರಣೆ ಅಥವಾ ವಿಚಾರಣೆಗೆ ಪರ್ಯಾಯವಾಗಿದೆ.ಈ ಪ್ರಕರಣದಲ್ಲಿ ಅದನ್ನು ತೀರ್ಪಿಗಾಗಿ ರವಾನಿಸಿದ್ದಾಗ, ಅಧಿವಿಚಾರಣೆಯನ್ನು ಅಂತಿಮ ಗೊಳಿಸಲಾಗಿದೆ.ಹಾಗಾಗಿ, ಅಧಿವಿಚಾರಣೆಯ ಹಂತವು ಈಗಾಗಲೇ ಮುಗಿದಿದೆ.ಪರಿಣಾಮವಾಗಿ, ಸಂಹಿತೆಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಮ್ಯಾಜಿಸ್ಟ್ರೇಟ್‌ರಿಂದ ಮನವಿ ಮಾಡಬಾರದಿತ್ತು.

5. ಅರ್ಜಿದಾರರ ಪರ ಮಾನ್ಯ ವಕೀಲರು ವಿನೋದ್ ಕುಮಾರ್ ಸಿಂಗ್ -ವಿರುದ್ಧ-ರಾಜಸ್ಥಾನ ರಾಜ್ಯ ಮೊಕದ್ದಮೆಯಲ್ಲಿ ರಾಜಸ್ಥಾನ ಉಚ್ಚ ನ್ಯಾಯಾಲಯದ ತೀರ್ಪನ್ನು ಸಹ ಅವಲಂಬಿಸಿದ್ದಾರೆ.ಅದರಲ್ಲಿ 9 ರಿಂದ 11 ರವರೆಗಿನ ಕಂಡಿಕೆಗಳಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

"9. ಅಲ್ಲದೆ, ' ಸಿಆರ್‌ಪಿಸಿ'ಯ 311 ನೇ ಪ್ರಕರಣದ ಅಡಿಯಲ್ಲಿನ ಉಪಬಂಧವನ್ನು ಯಾವುದೇ ವಿಚಾರಣೆಯ, ಅಧಿವಿಚಾರಣೆಯ ಅಥವಾ ಇತರ ವ್ಯವಹರಣೆಗಳ ಯಾವುದೇ ಹಂತದಲ್ಲಿ ಚಲಾಯಿಸಬಹುದು. 'ವಿಚಾರಣೆ ', ' ಅಧಿವಿಚಾರಣೆ ' ಅಥವಾ ' ಇತರ ವ್ಯವಹರಣೆಗಳು 9 ಎಂಬ ಪದಗಳನ್ನು ಪರ್ಯಾಯವಾಗಿ ಉಲ್ಲೇಖಿಸಲಾಗಿದೆ.ಸದ್ಯದ ವಿಷಯದಲ್ಲಿ, ಇದೊಂದು ಅಧಿವಿಚಾರಣಾ ಪ್ರಕರಣವಾಗಿತ್ತು.ಉಪಬಂಧವು ' ವಿಚಾರಣೆ ' ಮತ್ತು ' ಅಧಿವಿಚಾರಣೆ'ಗಿಂತ ಭಿನ್ನವಾಗಿದೆ. 'ಇತರ ವ್ಯವಹರಣೆಗಳು ' ಎಂಬುದನ್ನು ಪರ್ಯಾಯವಾಗಿ ಉಲ್ಲೇಖಿಸಿದಾಗ, ಇತರ ವ್ಯವಹರಣೆಗಳು ಅಧಿವಿಚಾರಣೆಗಿಂತ ಭಿನ್ನವಾಗಿರತಕ್ಕದ್ದು.ನಿರ್ವಿವಾದವಾಗಿ, ಪ್ರಸ್ತುತ ಪ್ರಕರಣದಲ್ಲಿ, ಅಧಿವಿಚಾರಣೆ ನಡೆಸಲಾಗಿತ್ತು ಹಾಗೂ ಅಂತಿಮ ವಾದ-ವಿವಾದವನ್ನುದಿನಾಂಕ: 29.9.1999 ರಂದು ಆಲಿಸಲಾಗಿತ್ತು.ಆ ನಂತರ, ಪ್ರಕರಣವನ್ನುದಿನಾಂಕ: 05.10.1999 ರಂದು ತೀರ್ಪಿಗಾಗಿ ರವಾನಿಸಲಾಯಿತು.

10. ದಂಡ ಪ್ರಕ್ರಿಯಾ ಸಂಹಿತೆಯ 353 ( 1) ನೇ ಪ್ರಕರಣವು ತೀರ್ಪಿನ ಬಗ್ಗೆ ಉಪಬಂಧಿಸಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

353. (1) ಮೂಲ ಅಧಿಕಾರವ್ಯಾಪ್ತಿಯುಳ್ಳ ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿನ ಪ್ರತಿಯೊಂದು ಅಧಿವಿಚಾರಣೆಯಲ್ಲಿ, ಅಧಿವಿಚಾರಣೆಯು ಮುಕ್ತಾಯವಾದ ಕೂಡಲೇ ಅಥವಾ ಅನಂತರ ಯಾವುದೇ ಸಮಯದಲ್ಲಿ ಪಕ್ಷಕಾರರಿಗೆ ಅಥವಾ ಅವರ ಫೀಡರ್ಗೆ ಅದರ ಬಗ್ಗೆ ನೋಟೀಸನ್ನು ಕೊಟ್ಟು:

( ಎ) ತೀರ್ಪನ್ನು ಪೂರ್ಣವಾಗಿ ಹೇಳುವ ಮೂಲಕ; ಅಥವಾ

(ಬಿ) ತೀರ್ಪನ್ನು ಪೂರ್ಣವಾಗಿ ಓದುವ ಮೂಲಕ; ಅಥವಾ

(ಸಿ) ತೀರ್ಪಿನಲ್ಲಿರುವ ಜಾರಿಗೊಳಿಸಬೇಕಾದ ಭಾಗವನ್ನು ಓದುವ ಮೂಲಕ ಮತ್ತು ಆಪಾದಿತನಿಗೆ ಅಥವಾ ಅವನ ಫೀಡರ್ಗೆ ಅರ್ಥವಾಗುವ ಭಾಷೆಯಲ್ಲಿ ತೀರ್ಪಿನ ಸಾರಾಂಶವನ್ನು ವಿವರಿಸುವ ಮೂಲಕ,

ಪ್ರಿಸೈಡಿಂಗ್ ಅಧಿಕಾರಿಯು ನ್ಯಾಯಾಲಯದಲ್ಲಿ ಬಹಿರಂಗವಾಗಿ ಉದ್ಘೋಷಿಸತಕ್ಕದ್ದು.

ಬೇರೆ ರೀತಿಯಲ್ಲಿ ಹೇಳುವುದಾದರೆ, ಅಧಿವಿಚಾರಣೆಯು ಮುಕ್ತಾಯವಾದ ಮೇಲೆ ತೀರ್ಪಿನ ಹ ಂ ತ ಬರುತ್ತದೆ.ಅಧಿವಿಚಾರಣೆಯ ಮುಕ್ತಾಯದ ನಂತರ ಕೂಡಲೇ ಅಥವಾ ಅದಕ್ಕಾಗಿ ನೀಡಿರಬಹುದಾದ ದಿನಾಂಕದ ತರುವಾಯ ತೀರ್ಪು ಬರಬಹುದು ಮತ್ತು ಪ್ರಕರಣವನ್ನು ಹಾಗೆ ರವಾನಿಸಲಾಗಿದೆ.ಆದುದರಿಂದ, ಪ್ರಕರಣವನ್ನು ತೀರ್ಪಿಗಾಗಿ ಕಳುಹಿಸಿದಾಗ, ಅಧಿವಿಚಾರಣೆಯು ಕೊನೆಗೊಳ್ಳುತ್ತದೆ.

11. ಸದ್ಯದ ಪ್ರಕರಣದಲ್ಲಿ, ಮಾನ್ಯ ವಿಚಾರಣಾ ನ್ಯಾಯಾಲಯವುದಿನಾಂಕ: 5.10.1999 ರಂದು ಪ್ರಕರಣವನ್ನು ತೀರ್ಪಿಗಾಗಿ ರವಾನಿಸಿತ್ತು ಮತ್ತು ಇದು, ' ಸಿಆರ್ಪಿಸಿ'ಯ 353 ನೇ ಪ್ರಕರಣದ ಅಡಿಯಲ್ಲಿನ ಉಪಬಂಧಗಳ ಹಿನ್ನೆಲೆಯಲ್ಲಿ, 29.09.1999 ರಂದು ಅಧಿವಿಚಾರಣೆಯು ಕೊನೆಗೊಂಡಿತ್ತು ಎಂಬುದನ್ನು ತೋರಿಸುತ್ತದೆ. 'ಸಿಆರ್ಪಿಸಿ ' ಯ 311 ನೇ ಪ್ರಕರಣದ ಅಡಿಯಲ್ಲಿನ ಉಪಬಂಧವನ್ನು ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಗಳ ಯಾವುದೇ ಹಂತದಲ್ಲಿ ಚಲಾಯಿಸಬೇಕಿದ್ದಾಗ ಮತ್ತು ಮೇಲೆ ಹೇಳಲಾದಂತೆ, ' ಇತರ ವ್ಯವಹರಣೆಗಳು ' ಎಂಬ ಪದವು ಅಧಿವಿಚಾರಣೆಗೆ ಪರ್ಯಾಯವಾಗಿದೆ.ಆದುದರಿ ಂ ದ, ಪ್ರಸ್ತುತ ಪ್ರಕರಣದಲ್ಲಿ, ಇದೊಂದು ಅಧಿವಿಚಾರಣೆಯಾಗಿದ್ದು, ಅದನ್ನು ತೀರ್ಪಿಗಾಗಿ ರವಾನಿಸಲಾಗಿದ್ದು, ಅಧಿವಿಚಾರಣೆಯ ಹಂತವು ಕೊನೆಗೊಂಡಿತ್ತು.

ಬೇರೆ ರೀತಿಯಲ್ಲಿ ಹೇಳುವುದಾದರೆ, ಮಾನ್ಯ ವಿಚಾರಣಾ ನ್ಯಾಯಾಲಯವು ವಿಷಯವನ್ನು ತೀರ್ಪಿಗಾಗಿ ರವಾನಿಸಿದಾಗ ಪ್ರಸ್ತುತ ಪ್ರಕರಣದಲ್ಲಿ ಅಧಿವಿಚಾರಣೆಯು ಅದಾಗಲೇ ಕೊನೆಗೊಂಡಿತ್ತು.ತತ್ಪರಿಣಾಮವಾಗಿ, ಒಮ್ಮೆ ಅಧಿವಿಚಾರಣೆಯು ಕೊನೆಗೊಂಡ ಮೇಲೆ ಮಾನ್ಯ ಮ್ಯಾಜಿಸ್ಟ್ರೇಟರು ಸಂಹಿತೆಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಲು ಸಾಧ್ಯವಿರಲಿಲ್ಲ.ವಿಷಯವನ್ನು ತೀರ್ಪಿಗಾಗಿ ರವಾನಿಸಿದಾಗ, ಆ ದಿನದಂದು ಮಾನ್ಯ ಮ್ಯಾಜಿಸ್ಟ್ರೇಟರು ಸದರಿ ಉಪಬಂಧಗಳನ್ನು ಅನ್ವಯಿಸಲು ಸಾಧ್ಯವಿಲ್ಲ.ಆದುದರಿಂದ, ಇದೊಂದನ್ನೇ ಲೆಕ್ಕಕ್ಕೆ ತೆಗೆದುಕೊಂಡರೆ ಪ್ರಸ್ತುತ ಪ್ರಕರಣದಲ್ಲಿನ ಪ್ರಶ್ನಿತ ಆದೇಶವು ಸಮರ್ಥನೀಯವಾಗಿಲ್ಲ.

6. ' ಸಿಆರ್ಪಿಸಿ'ಯ 311 ನೇ ಪ್ರಕರಣವನ್ನು ಅನ್ವಯಿಸುವ ಮೂಲಕ ಪ್ರಾಸಿಕ್ಯೂಷನ್ ಪ್ರಕರಣದಲ್ಲಿನ ಕೊರತೆಯನ್ನು ತುಂಬಲು ಪ್ರಾಸಿಕ್ಯೂಷನ್ಗೆ ಅನುಮತಿ ನೀಡಲು ಸಾಧ್ಯವಿಲ್ಲ ಎಂದೂ ಸಹ ಅವರು ನಿವೇದಿಸಿದ್ದಾರೆ ಮತ್ತು ಈ ಸಂದರ್ಭದಲ್ಲಿ, ಅವರು ರಾಜೇಂದ್ರ ಪ್ರಸಾದ್ -ವಿರುದ್ಧ ಮಾದಕ ದ್ರವ್ಯ ಕೋಶ, ಅದರ ಉಸ್ತುವಾರಿ ಅಧಿಕಾರಿಯ ಮುಖಾಂತರ, ದೆಹಲಿ 2 ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ

ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.ಅದರ 8ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ತೀರ್ಮಾನಿಸಲಾಗಿದೆ:

8. ನ್ಯಾಯಾಲಯಗಳು ಸಂಹಿತೆಯ 311 ನೇ ಪ್ರಕರಣದ ಅಡಿಯಲ್ಲಿ ಅಥವಾ ಸಾಕ್ಷ್ಯ ಎ ಅಧಿನಿಯಮದ 165 ನೇ ಪ್ರಕರಣದ ಅಡಿಯಲ್ಲಿ, ನ್ಯಾಯಾಲಯವು ಪ್ರಾಸಿಕ್ಯೂಷನ್ ಪ್ರಕರಣದಲ್ಲಿನ ಕೊರತೆಯನ್ನು ತುಂಬಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಅಧಿಕಾರಗಳನ್ನು ಚಲಾಯಿಸಿದಾಗಲೆಲ್ಲಾ ಪ್ರತಿವಾದಿ ವಕೀಲರು ಆಕ್ಷೇಪಗಳನ್ನು ಎತ್ತುತ್ತಾರೆ ಎನ್ನುವುದು ಕ್ರಿಮಿನಲ್ ನ್ಯಾಯಾಲಯಗಳ ಒಂದು ಸಾಮಾನ್ಯ ಅನುಭವವಾಗಿದೆ.ಪ್ರಾಸಿಕ್ಯೂಷನ್ನಲ್ಲಿ ಕೊರತೆ ಎಂಬುದನ್ನು ಅಧಿವಿಚಾರಣಾ ಅವಧಿಯಲ್ಲಿ ಸರ್ಕಾರಿ ಪ್ರಾಸಿಕ್ಯೂಟರ್ ಸೂಕ್ತವಾದ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸುವಾಗ ಆಗಲೀ ಅಥವಾ ಸಾಕ್ಷಿದಾರರಿಂದ ಸರಿಯಾದ ಉತ್ತರಗಳನ್ನು ಪಡೆಯುವಾಗ ಆಗಲೀ ಅಜಾಗರೂಕತೆಯಿ ೦ ದ ಎಸಗಿದ ತಪ್ಪಿನೊಂದಿಗೆ ಸಮೀಕರಿಸಬಾರದು. 'ತಪ್ಪು ಮಾಡುವುದು ಮನುಷ್ಯ ಸಹಜ ಕ್ರಿಯೆ ' ಎಂಬ ನಾಣ್ನುಡಿಯು ಮಾನವರು ಮಾಡಬಲ್ಲರೆಂದು ಸಾಬೀತಾಗಿರುವ, ತಪ್ಪುಗಳನ್ನು ಮಾಡುವ ಸಾಧ್ಯತೆಯನ್ನು ಗುರುತಿಸುವುದಾಗಿದೆ.ಒಂದು ಪ್ರಕರಣವನ್ನು ನಡೆಸುವ ಅವಧಿಯಲ್ಲಿ ಅಂತಹ ಯಾವುದೇ ಲೋಪ ದೋಷಗಳ ಪರಿಣಾಮವನ್ನು, ನ್ಯಾಯಾಲಯವು ಲೋಪವನ್ನು ಸರಿಪಡಿಸಲು ಸಾಧ್ಯವಿಲ್ಲದ ಕಾರಣ ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಪ್ರಾಸಿಕ್ಯೂಷನ್ನಲ್ಲಿ ಲೋಪವನ್ನು ಪ್ರಾಸಿಕ್ಯೂಷನ್ ಪ್ರಕರಣದ ಮ್ಯಾಟ್ರಿಕ್ಸ್ನಲ್ಲಿ ಅಂತರ್ಗತ ದುರ್ಬಲತೆ ಅಥವಾ ಕಾಣದಂತೆ ಒಳಗೆ ಸಿಕ್ಕಿಹಾಕಿಕೊಂಡಿರುವ ಬೆಣೆ ಎಂದು ಅರ್ಥೈಸಿಕೊಳ್ಳಬೇಕು.ಅದರ ಪ್ರಯೋಜನವು ಸಾಮಾನ್ಯವಾಗಿ ಮೊಕದ್ದಮೆಯ ಅಧಿವಿಚಾರಣೆಯಲ್ಲಿ ಆರೋಪಿಗೆ ಹೋಗುತ್ತದೆ.ಆದರೆ, ಪ್ರಾಸಿಕ್ಯೂಷನ್ನ ನಿರ್ವಹಣೆಯಲ್ಲಿ ಅಜಾಗರೂಕತೆಯನ್ನು ಸರಿಪಡಿಸಲಾಗದ ಲೋಪ ಎ 0 ದು ಪರಿಗಣಿಸಲಾಗುವುದಿಲ್ಲ.ಅಧಿವಿಚಾರಣೆಯಲ್ಲಿ ದೋಷಗಳನ್ನು ಸರಿಪಡಿಸುವ ಮುನ್ನ ಅಧಿವಿಚಾರಣೆಯಲ್ಲಿ ಯಾವುದೇ ಪಕ್ಷವು ಕೊನೆಗೊಳ್ಳುವುದಿಲ್ಲ.ಯಾವುದೇ ಅಚಾತುರ್ಯದಿಂದಾಗಿ ಸರಿಯಾದ ಸಾಕ್ಷ್ಯವನ್ನು ಮಂಡಿಸದಿದ್ದಲ್ಲಿ ಅಥವಾ ಸ ೦ ಬ ೦ ಧಿ ತ ಸಾಕ್ಷ್ಯಾಧಾರಗಳನ್ನು ದಾಖಲೆಗೆ ತರದಿದ್ದಲ್ಲಿ, ಅಂತಹ ತಪ್ಪುಗಳನ್ನು ಸರಿಪಡಿಸಲು ಅನುಮತಿಸುವಲ್ಲಿ ನ್ಯಾಯಾಲಯವು ಉದಾತ್ತವಾಗಿರಬೇಕು.ಕ್ರಿಮಿನಲ್ ನ್ಯಾಯಾಲಯದ ಕಾರ್ಯವು ಕ್ರಿಮಿನಲ್ ನ್ಯಾಯಾಡಳಿತವಷ್ಟೇ ಆಗಿದೆಯೇ ಹೊರತು, ಪಕ್ಷಕಾರರು ಮಾಡಿದ ದೋಷಗಳನ್ನು ಎಣಿಸುವುದಲ್ಲ ಅಥವಾ ಪಕ್ಷಕಾರರಲ್ಲಿ ಯಾರು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂಬುದನ್ನು ಕಂಡುಹಿಡಿಯುವುದಲ್ಲ ಮತ್ತು ಘೋಷಿಸುವುದಲ್ಲ ".

7. ಇದಕ್ಕೆ ವಿರುದ್ಧವಾಗಿ, ಮಾನ್ಯ ಎಚ್ಸಿಜಿಪಿಯವರು ಪ್ರಶ್ನಿತ ಆದೇಶವನ್ನು ಸಮರ್ಥಿಸಿ ವಾದಿಸಿದ್ದಾರೆ ಮತ್ತು ಅವರುದಿನಾಂಕ: 8.3.2018 ರಂದು ವಿಲೆಯಾದ ಖೂಬ್ ಸಿಂಗ್ ಬಿನ್ ಕನ್ನಯ್ಯ ವಿರುದ್ಧ ಮಧ್ಯಪ್ರದೇಶ ರಾಜ್ಯ ಮೊಕದ್ದಮೆಯಲ್ಲಿ ಮಧ್ಯಪ್ರದೇಶದ ಉಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ.ಅದರಲ್ಲಿನ 22 ನೇ ಕಂಡಿಕೆಯಲ್ಲಿ ಅದನ್ನು ಈ ಕೆಳಗಿನಂತೆ ನಿರ್ಧರಿಸಲಾಗಿದೆ:

“22. ತತ್ಪರಿಣಾಮವಾಗಿ, ಇಮ್ರುತ್ ಸಿಂಗ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಪು ಸರಿಯಾದ ಕಾನೂನನ್ನು ರೂಪಿಸುವುದಿಲ್ಲ ಮತ್ತು ಆದ್ದರಿಂದ, ಅದನ್ನು ರದ್ದು ಮಾಡಲಾಗಿದೆ ಎಂದು ನಾವು ಅಭಿಪ್ರಾಯಪಟ್ಟಿದ್ದೇವೆ.ಮೇಲೆ ಉಲ್ಲೇಖಿಸಲಾದ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಚ ಅವಲ ೦ ಬಿಸಿ, ತೀರ್ಪನ್ನು ಘೋಷಿಸಿದ ನಂತರ ಮಾತ್ರವೇ ಅಧಿವಿಚಾರಣೆ ಪೂರ್ಣಗೊಂಡಿದೆಯೆಂಬ ವಾದದ

ಮುಕ್ತಾಯದ ನಂತರವೂ ಸಹ ಅಧಿವಿಚಾರಣೆಯ ಯಾವುದೇ ಹಂತದಲ್ಲಿ ಸಂಹಿತೆಯ 311 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು.ಸ ೦ ಹಿತೆಯ 353 ನೇ ಪ್ರಕರಣದ ಪ್ರಕಾರ ಪ್ರತಿಯೊಂದು ಅಧಿವಿಚಾರಣೆಯಲ್ಲಿ ಅಧಿವಿಚಾರಣೆಯ ಮುಕ್ತಾಯದ ನಂತರ ಕೂಡಲೇ ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು ಘೋಷಿಸಬೇಕು.ಸಾಕ್ಷಿದಾರರ ಸಾಕ್ಷ್ಯ ದಾಖಲಾತಿ ಪೂರ್ಣಗೊಂಡರೂ, ತೀರ್ಪು ಎಸ್ ಪ್ರಕಟವಾದ ನಂತರವೇ ಅಧಿವಿಚಾರಣೆ ಮುಕ್ತಾಯವಾಗುತ್ತದೆ."

8. ಈ ಅರ್ಜಿಯಲ್ಲಿ ಉದ್ಭವಿಸುವ ಪರಿಶೀಲನಾಂಶವು ಈ ಕೆಳಗಿನಂತಿದೆ:

" ಪ್ರಕರಣವನ್ನು ತೀರ್ಪಿಗಾಗಿ ಕಳುಹಿಸಿದ ಆ ಹಂತದಲ್ಲಿಯೂ ಸಹ ನ್ಯಾಯಾಲಯವು ' ಸಿಆರ್‌ಪಿಸಿ ' ಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಅನ್ವಯಿಸಬಹುದೆ?"

9. ಸಿಆರ್‌ಪಿಸಿ'ಯ 311 ನೇ ಪ್ರಕರಣವನ್ನು ಓದುವುದರಿಂದ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಗಳ ಯಾವುದೇ ಹಂತದಲ್ಲಿ ನ್ಯಾಯಾಲಯವು ಸಂಹಿತೆಯ ಅಡಿಯಲ್ಲಿನ ಯಾವುದೇ ವಿಚಾರಣೆ ಚಲಾಯಿಸಬಹುದು ಎಂಬುದು ಸ್ಪಷ್ಟವಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ವಿಚಾರಣಾ ನ್ಯಾಯಾಲಯವು ಅಧಿವಿಚಾರಣೆಯ ೨೨ ಅವಧಿಯಲ್ಲಿ ಅಧಿಕಾರವನ್ನು ಚಲಾಯಿಸಿದೆ.

10. ದಂಡ ಪ್ರಕ್ರಿಯಾ ಸಂಹಿತೆಯಲ್ಲಿ (ಸಿಆರ್‌ಪಿಸಿ) ' ಅಧಿವಿಚಾರಣೆ ' ಎಂಬ ಪದವನ್ನು ಔಪಚಾರಿಕವಾಗಿ ವ್ಯಾಖ್ಯಾನಿಸಿಲ್ಲ.ಆದಾಗ್ಯೂ, ' ವಿಚಾರಣೆ ' ಎಂಬ ಪದವನ್ನು ಈ ಸಂಹಿತೆಯ 2 (ಜಿ) ಪ್ರಕರಣದಲ್ಲಿ ವ್ಯಾಖ್ಯಾನಿಸಲಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗುತ್ತದೆ:

" " ವಿಚಾರಣೆ " ಎಂದರೆ, ಮ್ಯಾಜಿಸ್ಟ್ರೇಟ್ ಅಥವಾ ನ್ಯಾಯಾಲಯವು ಈ ಸಂಹಿತೆಯ ಅಡಿಯಲ್ಲಿ ನಡೆಸಲಾದ ಅಧಿವಿಚಾರಣೆಯನ್ನು ಹೊರತುಪಡಿಸಿ, ಪ್ರತಿಯೊಂದು ವಿಚಾರಣೆ ಎಂದರ್ಥವಾಗಿದೆ ".

11. ಹರ್ದೀಪ್ ಸಿಂಗ್ -ವಿರುದ್ಧ ಪಂಜಾಬ್ ರಾಜ್ಯ(2014) 3 ಎಸ್ಸಿಸಿ 92, ಮೊಕದ್ದಮೆಯಲ್ಲಿ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು, ' ಸಿಆರ್‌ಪಿಸಿ'ಯ 319 ನೇ ಪ್ರಕರಣದ ವ್ಯಾಪ್ತಿಯನ್ನು ಪರಿಗಣಿಸುವಾಗ, ಅಧಿವಿಚಾರಣೆಯು ವಿಚಾರಣೆಗಿಂತ ಭಿನ್ನವಾಗಿದ್ದು, ಅವಶ್ಯವಾಗಿ ಅದರ ನಂತರ ಬರಬೇಕು ಎಂದು ಅಭಿಪ್ರಾಯಪಟ್ಟಿದೆ.ಅಧಿವಿಚಾರಣೆಯ ಉದ್ದೇಶವು, ಮಂಡಿಸಲಾದ ಸಂಗತಿಗಳು ಮತ್ತು ಇದಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿದ ಸಾಕ್ಷ್ಯಗಳ ಆಧಾರದ ಮೇಲೆ ಒಬ್ಬ ವ್ಯಕ್ತಿಗೆ ಜವಾಬ್ದಾರಿಯನ್ನು ಹೊರಿಸುವುದಾಗಿದೆ. 'ಅಧಿವಿಚಾರಣೆ ' ಎಂದರೆ, ಒಬ್ಬ ವ್ಯಕ್ತಿಯ ಅಪರಾಧ ಅಥವಾ ಮುಗ್ಧತೆಯನ್ನು ನಿರ್ಣಯಿಸುವ ವಿವಾದಾ ೦ ಶಗಳ ನಿರ್ಧಾರವಾಗಿದ್ದು, ಆ ವ್ಯಕ್ತಿಯು ತನ್ನ ವಿರುದ್ಧದ ಮೊಕದ್ದಮೆ ಏನೆಂಬುದನ್ನು ತಿಳಿದಿರಬೇಕು ಮತ್ತು ಆರೋಪಗಳನ್ನು ರೂಪಿಸುವ ಹಂತದಲ್ಲಿ ಮಾತ್ರ ಅದರ ನೋಟೀಸನ್ನು ನ್ಯಾಯಾಲಯವು ಅವನಿಗೆ ನೀಡುತ್ತದೆ ಎಂದು ತೀರ್ಮಾನಿಸುವ ಮೂಲಕ ಕಾನೂನಿನ ಸ್ಥಾನವನ್ನು ಸಂಕ್ಷಿಪ್ತಗೊಳಿಸಲಾಗಿದೆ.ಆರೋಪವನ್ನು ರೂಪಿಸಿದ ನಂತರ ಮಾತ್ರ ಅಧಿವಿಚಾರಣೆ ಪ್ರಾರಂಭವಾಗುತ್ತದೆ. 'ಸಿಆರ್‌ಪಿಸಿ'ಯ 2 (ಜಿ) ಪ್ರಕರಣದ ಅಡಿಯಲ್ಲಿ ವಿಚಾರಣೆಯು ಅಧಿವಿಚಾರಣೆಯ ವಾಸ್ತವಿಕ ಪ್ರಾರಂಭಕ್ಕಿಂತ ಮೊದಲಿನ ಹಂತವಾಗಿದೆ ಮತ್ತು ಅದು ಮ್ಯಾಜಿಸ್ಟ್ರೇಟ್ ಅಥವಾ ನ್ಯಾಯಾಲಯವು ಸಿಆರ್‌ಪಿಸಿ ಅಡಿಯಲ್ಲಿ ನಡೆಸಲಾದ ಕಾರ್ಯವಾಗಿದೆ ಮತ್ತು ಅದು ತನಿಖಾ ಏಜೆನ್ಸಿಯಿಂದ ಪ್ರಕರಣದ ತನಿಖೆ ನಡೆಸುವುದಕ್ಕೆ ಸಂಬಂಧಪಡುವುದಿಲ್ಲ.ಆದರೆ, ಆರೋಪಪಟ್ಟಿಯನ್ನು ಸಲ್ಲಿಸಿದ ಮೇಲೆ ಪ್ರಕರಣವನ್ನು ನ್ಯಾಯಾಲಯದ

ಗಮನಕ್ಕೆ ತಂದ ನಂತರದ ವಿಚಾರಣೆಯಾಗಿದೆ.ಆದ್ದರಿಂದ, ಅಧಿವಿಚಾರಣೆಗಿಂತ ಮೊದಲು ನಡೆಸಿದ ವಿಚಾರಣೆಯು ವಿಭಿನ್ನವಾದದ್ದಾಗಿದೆ.ಅಧಿವಿಚಾರಣೆಯ ಅವಧಿಯಲ್ಲಿ ಆಪಾದಿತನ ವಿರುದ್ಧದ ಆರೋಪ ಅಥವಾ ಆಪಾದನೆಯ ಪರಿಶೀಲನೆ ಮತ್ತು ನಿರ್ಧಾರವು ನ್ಯಾಯಾಲಯದ ಮುಂದೆ ನಡೆಯಬಹುದು ಹಾಗೂ ಇದರಿಂದ ಆಪಾದಿತನ ಅಪರಾಧ ನಿರ್ಣಯ ಅಥವಾ ಖುಲಾಸೆಯಾಗಬಹುದು.ಅಧಿವಿಚಾರಣೆಯ ಅವಧಿಯಲ್ಲಿ ನ್ಯಾಯಾಲಯವು ಸಾಕ್ಷ್ಯಗಳನ್ನು ದಾಖಲಿಸಿಕೊಳ್ಳಬಹುದು ಹಾಗೂ ಅಂಥ ಸಾಕ್ಷ್ಯಗಳ ಗುಣಾವಗುಣಗಳ ಆಧಾರದ ಮೇಲೆ, ಅದರ ತೀರ್ಪು ಪ್ರಕಟವಾಗಿರಬಹುದು.

12. ಮೋಹನ್ಲಾಲ್ ಶ್ಯಾಮ್ ಜಿ ಸೋನಿ -ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇನ್ನೊಬ್ಬರು ಎಐಆರ್ 1991 ಎಸ್ಸಿ 1346, ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ಚ ನ್ಯಾಯಾಲಯವು 21 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ತೀರ್ಮಾನಿಸಿದೆ:

"21. ಪುನರಾವರ್ತನೆಯ ಆಪಾಯದಲ್ಲಿ ಯಾವುದೇ ಕಾಲಪರಿಮಿತಿ ಅಥವಾ ನಿಷೇಧಕ್ಕೆ ಪರಿಮಿತಗೊಳ್ಳದೆ, ನ್ಯಾಯಾಲಯವು ಕ್ರಿಮಿನಲ್ ವ್ಯವಹರಣೆಯ ಅಧಿಧಾರಣವನ್ನು ಉಳಿಸಿಕೊಳ್ಳುವವರೆಗೆ, ಯಾವುದೇ ಹಂತದಲ್ಲಿ ತನ್ನ ಅಂತರ್ಗತ ಅಧಿಕಾರವನ್ನು ಅನ್ವಯಿಸಲು 540 ನೇ ಪ್ರಕರಣವು ನ್ಯಾಯಾಲಯಕ್ಕೆ ಅನುಮತಿ ನೀಡುತ್ತದೆ ಎಂದು ಹೇಳಬಹುದಾಗಿದೆ.ಆದೇಶ ಅಥವಾ ತೀರ್ಪನ್ನು ಉಚ್ಚರಿಸಿದಾಗ ಕ್ರಿಮಿನಲ್ ವ್ಯವಹರಣೆಯಲ್ಲಿನ ವಿಚಾರಣೆ ಅಥವಾ ಅಧಿವಿಚಾರಣೆಯು ಮುಕ್ತಾಯಗೊಳ್ಳುತ್ತದೆ ಅಥವಾ ಅಂತಿಮತೆಯನ್ನು ತಲುಪುತ್ತದೆ ಮತ್ತು ಅಲ್ಲಿಯವರೆಗೆ ನ್ಯಾಯಾಲಯವು ಈ ಪ್ರಕರಣವನ್ನು ಬಳಸಿಕೊಳ್ಳುವ ಅಧಿಕಾರವನ್ನು ಹೊಂದಿದೆ ಎಂಬುದನ್ನು ಹೇಳಬೇಕಾದ ಅಗತ್ಯವಿಲ್ಲ.೨೨

13. ತರುವಾಯ, ರಾಜೇಂದ್ರ ಪ್ರಸಾದ್ ರವರ ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಉಲ್ಲೇಖಿಸಿರುವ ಮೋಹನ್ಲಾಲ್ ಶ್ಯಾಮ್ಜಿ ಸೋನಿಯವರ ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ದೃಷ್ಟಿಯಿಂದ, ಕ್ರಿಮಿನಲ್ ವ್ಯವಹರಣೆಗಳಲ್ಲಿ ' ಅಧಿವಿಚಾರಣೆ ' ಎಂಬ ಪದಪ್ರಯೋಗವು ಪ್ರಕರಣದಲ್ಲಿ ಉಚ್ಚರಿಸುವ ಹಂತವನ್ನು ಒಳಗೊಳ್ಳುತ್ತದೆಯೇ?ಎಂಬ ಪ್ರಶ್ನೆಯು ಪೂರ್ವ ನಿದರ್ಶನರಹಿತ ವಿಷಯವಾಗಿ ಉಳಿದಿಲ್ಲ.ಮೋಹನ್ಲಾಲ್ ಶ್ಯಾಮ್ಜಿ ಸೋನಿಯವರ ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಹೊಸ ಸಂಹಿತೆಯ 311 ನೇ ಪ್ರಕರಣಕ್ಕೆ ಅನುಗುಣವಾದ ಉಪಬಂಧವಾಗಿರುವ, ಹಳೆಯ ಸಂಹಿತೆಯ 540 ನೇ ಪ್ರಕರಣವನ್ನು ಉಲ್ಲೇಖಿಸಿದೆ.ಮೋಹನ್ಲಾಲ್ ಶ್ಯಾಮ್ಜಿ ಸೋನಿಯವರ ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, ಆದೇಶ ಅಥವಾ ತೀರ್ಪನ್ನು ಪ್ರಕಟಿಸಿದಾಗ, ಕ್ರಿಮಿನಲ್ ವ್ಯವಹರಣೆಗಳಲ್ಲಿ ಅಧಿವಿಚಾರಣೆಯು ಮುಕ್ತಾಯವಾಗುತ್ತದೆ ಅಥವಾ ಅಂತಿಮತೆಯನ್ನು ತಲುಪುತ್ತದೆ ಮತ್ತು ಅಲ್ಲಿಯವರೆಗೆ, ನ್ಯಾಯಾಲಯವು ' ಸಿಆರ್ಪಿಸಿ'ಯ 311 ನೇ ಪ್ರಕರಣವನ್ನು ಬಳಸಿಕೊಳ್ಳುವ ಅಧಿಕಾರವನ್ನು ಹೊಂದಿದೆ ಎಂದು ತೀರ್ಮಾನಿಸಿದೆ.ಆದುದರಿಂದ, ಮೊಕದ್ದಮೆಯನ್ನು ಈಗ ತೀರ್ಪಿಗಾಗಿ ಕಳುಹಿಸಿರುವುದರಿಂದ ಅಧಿವಿಚಾರಣೆಯ ಹಂತವು ಈಗಾಗಲೇ ಮುಕ್ತಾಯವಾಗಿರುವ ಕಾರಣ ಮಾನ್ಯ ಸೆಷನ್ಸ್ ನ್ಯಾಯಾಧೀಶರು ಸಿಆರ್ಪಿಸಿ'ಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಅನ್ವಯಿಸಲು ಸಾಧ್ಯವಿರುವುದಿಲ್ಲ ಎಂಬ ಅರ್ಜಿದಾರರ ಪರ ಮಾನ್ಯ ವಕೀಲರ ವಾದದಲ್ಲಿ ಯಾವುದೇ ಹುರುಳಿಲ್ಲ ಎಂಬುದು ನನ್ನ ಪರಿಗಣಿತ ಅಭಿಪ್ರಾಯವಾಗಿದೆ.ತದನುಸಾರವಾಗಿ, ಪರಿಗಣನೆಗಾಗಿ ಇರುವ ಪ್ರಶ್ನೆಗೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

14. ಸಿಆರ್‌ಪಿಸಿ'ಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ, ಪ್ರಾಸಿಕ್ಯೂಷನ್ ಕೇಸಿನಲ್ಲಿನ ಲೋಪವನ್ನು ತುಂಬಲು ಪ್ರಾಸಿಕ್ಯೂಷನ್ಗೆ ಅನುಮತಿಸತಕ್ಕದ್ದಲ್ಲ ಎಂಬ ಅರ್ಜಿದಾರರ ಪರ ಮಾನ್ಯ ವಕೀಲರ ಎರಡನೇ ವಾದವೂ ಸಹ ಪರಿಗಣಿಸಲು ಅರ್ಹವಾಗಿಲ್ಲ.ಪ್ರಸ್ತುತ ಪ್ರಕರಣದಲ್ಲಿ, ಪಿ.ಡಬ್ಲ್ಯು -30 ನ್ನು ಪರಿಶೀಲಿಸಲಾಗಿದ್ದು, ಅವರ ಸಾಕ್ಷ್ಯವನ್ನು ಡಿಎನ್ಎ ವರದಿಯು ಇಲ್ಲದ್ದರಿಂದಾಗಿ ಮುಂದೂಡಲಾಗಿದೆ ಎಂದು ಮಾನ್ಯ ಸೆಷನ್ಸ್ ನ್ಯಾಯಾಧೀಶರು ಪ್ರಶ್ನಿತ ಆದೇಶದಲ್ಲಿ ತಿಳಿಸಿದ್ದಾರೆ.ಆದರೆ, ಸಂಬಂಧಪಟ್ಟ ' ಎಸ್ಎಚ್ ' ಗೆ ನೋಟೀಸು ಜಾರಿ ಮಾಡಿದ ನಂತರವೂ, ನ್ಯಾಯಾಲಯವು ಅದನ್ನು ಸ್ವೀಕರಿಸಲಿಲ್ಲ.ತರುವಾಯ, ಕೋವಿಡ್ - 19 ಸಾಂಕ್ರಾಮಿಕ ರೋಗ ತೀವ್ರಗೊಂಡಿದ್ದರಿಂದಾಗಿ, ನ್ಯಾಯಾಲಯಗಳ ಕಲಾಪಗಳನ್ನು ನಿಲ್ಲಿಸಲಾಯಿತು ಮತ್ತು ನ್ಯಾಯಾಲಯಗಳು ಪುನರಾರಂಭವಾದ ನಂತರ ಅಜಾಗರೂಕತೆಯ ಕಾರಣದಿಂದ ಪಿ.ಡಬ್ಲ್ಯು .30 ಕ್ಕೆ ಸಮನ್ಸ್ ನೀಡಲಾಗಿಲ್ಲ.ಇತರ ಸಾಕ್ಷಿಗಳನ್ನು ವಿಚಾರಣೆ ಮಾಡಿ, ಪಾಟೀ-ಸವಾಲು ಮಾಡಲಾಗಿದ್ದರೂ ಸಹ ಈ ವಿಷಯವನ್ನು ತೀರ್ಪಿಗಾಗಿ ಕಾಯ್ದಿರಿಸಿದ್ದಾಗ ಈ ತಪ್ಪು ನ್ಯಾಯಾಲಯದ ಗಮನಕ್ಕೆ ಬಂದಿರುತ್ತದೆ.ಆ ನಂತರ ಕೂಡಲೇ ಪಿ.ಡಬ್ಲ್ಯು .30 ನ್ನು ಮತ್ತೆ ಕರೆಸುವ ಉದ್ದೇಶಕ್ಕಾಗಿ ಈ ವಿಷಯವನ್ನು ನ್ಯಾಯಾಲಯದ ಮುಂದೆ ತರಲಾಯಿತು.ಮೇಲೆ ಉಲ್ಲೇಖಿಸಲಾದ ಕೆ. ಸಜೀಂದ್ರನ್ ರವರ ಮೊಕದ್ದಮೆಯಲ್ಲಿ ಕೇರಳ ಹೈಕೋರ್ಟ್ ನೀಡಿದ ತೀರ್ಪನ್ನು ಉಲ್ಲೇಖಿಸುವ ಮೂಲಕ ಇದನ್ನು ಆರೋಪಿಗಳ ಪರ ಮಾನ್ಯ ವಕೀಲರು ಆಕ್ಷೇಪಿಸಿದರು.ಪಿ.ಡಬ್ಲ್ಯು .30 ರ ಸಾಕ್ಷ್ಯದ ಅಗತ್ಯವಿದೆಯೆಂದೂ, ಇಲ್ಲದಿದ್ದರೆ, ಆರೋಪಿಗಳಿಗೆ ಮತ್ತು ಪ್ರಾಸಿಕ್ಯೂಷನ್ಗೆ ತೊಂದರೆ ಹಾಗೂ ಅನನುಕೂಲತೆ ಉಂಟಾಗಬಹುದು ಎಂದು ಮಾನ್ಯ ಸೆಷನ್ಸ್ ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.

15. ಪ್ರಶ್ನಿತ ಆದೇಶದಲ್ಲಿ ಮಾನ್ಯ ಸೆಷನ್ಸ್ ನ್ಯಾಯಾಧೀಶರು ನೀಡಿದ ಅಭಿಪ್ರಾಯಗಳನ್ನು ಓದುವುದರಿಂದ, ಮಾನ್ಯ ಸೆಷನ್ಸ್ ನ್ಯಾಯಾಧೀಶರು, ನ್ಯಾಯ ಸಂದಿದೆಯೇ ಎಂಬುದನ್ನು ನೋಡಲು ಮಾತ್ರ ' ಸಿಆರ್‌ಪಿಸಿ'ಯ 311 ನೇ ಪ್ರಕರಣದ ಅಡಿಯಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸಬಯಸಿದರು ಎಂಬುದು ಇಲ್ಲಿ ಸ್ಪಷ್ಟವಾಗಿದೆ.ಮೇಲೆ ಉಲ್ಲೇಖಿಸಲಾದ ಮೋಹನ್ಲಾಲ್ ಶ್ಯಾಮ್ಜಿ ಸೋನಿ ಯವರ ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು 16 ಮತ್ತು ಚ 18 ನೇ ಕಂಡಿಕೆಗಳಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

“16. ಆದಾಗ್ಯೂ, ಸೂಚಿಸಲಾದಂತೆ, 540 ನೇ ಪ್ರಕರಣದ ಎರಡನೇ ಭಾಗವು, ಯಾರೇ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಅಥವಾ ಮತ್ತೆ ಕರೆಸುವ ಹಾಗೂ ಮರುವಿಚಾರಣೆ ಮಾಡುವ ಹೊಣೆಗಾರಿಕೆಯನ್ನು ನ್ಯಾಯಾಲಯದ ಮೇಲೆ ಹೊರಿಸುತ್ತದೆ ಮತ್ತು ನಿಗದಿಪಡಿಸಲಾದ ಏಕೈಕ ಷರತ್ತು ಏನೆಂದರೆ, ಪಡೆಯಲು ಕೋರಲಾದ ಸಾಕ್ಷ್ಯವು ಮೊಕದ್ದಮೆಯ ನ್ಯಾಯಸಮ್ಮತ ತೀರ್ಮಾನಕ್ಕೆ ಅತ್ಯವಶ್ಯಕವಾಗಿ ಬೇಕಾಗುತ್ತದೆ.ವ್ಯವಹರಣೆಗಳ ಯಾರೇ ಪಕ್ಷಕಾರರು ಕೆಲವು ಸಾಕ್ಷ್ಯಗಳನ್ನು ತೆಗೆದುಕೊಂಡಿರುವ ಆಕ್ಷೇಪಣೀಯತೆಯನ್ನು ಸೂಚಿಸಿದ್ದರೂ ಈ ಉಪಬಂಧದ ಅಡಿಯಲ್ಲಿ ಬರುವ ಅತ್ಯಂತ ಪ್ರಧಾನವಾದ ನಿಯಮವು ನ್ಯಾಯದ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಸೂಕ್ತ ಸಂಗತಿಗಳ ಸರಿಯಾದ ಸಾಕ್ಷಿಯನ್ನು ಪತ್ತೆ ಮಾಡುವುದಾಗಿದೆ ಅಥವಾ ಪಡೆಯುವುದಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ನ್ಯಾಯಾಲಯವು ಪ್ರತಿಯೊಂದು ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳ ಮೇಲೆ ಅವಲ ಂ ಬಿಸಿ, ವಿವೇಚನಾತ್ಮಕವಾಗಿ ಆಗಲೀ ಅಥವಾ ಕಡ್ಡಾಯವಾಗಿ ಆಗಲೀ ಈ ಉಪಬಂಧದ ಅಡಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸಬೇಕು.ಈ ಸಂಬಂಧ, ಲಂಪ್ಕಿನ್, ಜೆ. ಇನ್ ಎಕ್ಸ್ ವಿ.ಎಸ್., 19 ಜಿಎ, 118 (ಎಎಂ) ರ ಈ ಮುಂದಿನ ಅಭಿಪ್ರಾಯಗಳ ಅನುಮೋದನೆಯೊಂದಿಗೆ ನಾವು ಉಲ್ಲೇಖಿಸಬಯಸುತ್ತೇವೆ.ಅದನ್ನು ಹೀಗೆ ಓದಲಾಗುತ್ತದೆ:

66 ಪ್ರಾಸಿಕ್ಯೂಷನ್ ಪರವಾಗಿ ಮಾಡಿರಲಿ ಅಥವಾ ವಿರುದ್ಧವಾಗಿ ಮಾಡಿರಲಿ, ಆ ಬಗ್ಗೆ ಸಾಕ್ಷಿದಾರನ ಗಮನಕ್ಕೆ ತರುವುದು ಪ್ರಿಸೈಡಿಂಗ್ ನ್ಯಾಯಾಧೀಶರ ಹಕ್ಕಷ್ಟೇ ಅಲ್ಲ, ಅದು ಅವರ ಕರ್ತವ್ಯವೂ ಆಗಿದೆ; ಅವರ ಉದ್ದೇಶವು ನಿರಪರಾಧಿಯನ್ನು ಶಿಕ್ಷಿಸುವುದಾಗಲೀ ಅಥವಾ ತಪ್ಪನ್ನು ಎತ್ತಿ ತೋರಿಸುವುದಾಗಲೀ ಅಲ್ಲ. ಆದರೆ ಅದು ಸರಿಯಾಗಿ ನ್ಯಾಯವನ್ನು ನಿರ್ವಹಿಸುವುದಾಗಿದೆ.ವಕೀಲರು ತಮ್ಮ ಕಕ್ಷಿದಾರನ ಒಳಿತನ್ನು ಮಾತ್ರ ಕೋರುವರು; ಆದರೆ, ನ್ಯಾಯಾಧೀಶರು ನ್ಯಾಯದ ಗೆಲುವನ್ನು ಕಾಣಬೇಕು ".

17. XXX XXX

18. ತರುವಾಯದ ಮುಖ್ಯ ಪ್ರಶ್ನೆಯೆಂದರೆ, 540 ನೇ ಪ್ರಕರಣವು, ನ್ಯಾಯಾಲಯಕ್ಕೆ ಅಸಾಧಾರಣ ಅಧಿಕಾರವನ್ನು ಚಲಾಯಿಸುವಲ್ಲಿ ಯಾವುದೇ ಆಧಾರವಾಗಿರುವ ತತ್ವವನ್ನು ರೂಪಿಸಲು ಸಂಪೂರ್ಣ ಸ್ವಾತಂತ್ರವನ್ನು ನೀಡುವುದೇ?ಮತ್ತು ಸದರಿ ಪ್ರಕರಣವು ಮಾರ್ಗದರ್ಶಕವಾಗಿಲ್ಲವೇ?ಅನಿಯಂತ್ರಿತವಾಗಿದೆಯೇ?ಮತ್ತು ಅನಿರ್ದಿಷ್ಟವಾಗಿದೆಯೇ?ಎಂಬುದಾಗಿದೆ.540 ನೇ ಪ್ರಕರಣವು (ಹೊಸ ಸಂಹಿತೆಯ 311 ನೇ ಪ್ರಕರಣ) ಸಾಧ್ಯವಾದಷ್ಟು ವ್ಯಾಪಕಾರ್ಥದ ಪದಗಳಲ್ಲಿ ಯಾವ ಹಂತದಲ್ಲಿ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಬೇಕು ಎಂಬುದಕ್ಕೆ ಸಂಬಂಧಿಸಿದಂತೆ, ಅಥವಾ ಯಾವ ರೀತಿಯಲ್ಲಿ ಅವುಗಳನ್ನು ಚಲಾಯಿಸಬೇಕು ಎಂಬುದನ್ನು ಸಂಬಂಧಿಸಿದಂತೆಯಾಗಲೀ ಯಾವುದೇ ಪರಿಮಿತಿಯನ್ನು ಅಪೇಕ್ಷಿಸದಿದ್ದರೂ, 540 ನೇ ಪ್ರಕರಣವನ್ನು ಒತ್ತಿ ಹೇಳುವ ತತ್ವದ ಮೂಲಕ ಎಂದರೆ, ಪಡೆಯಬೇಕಾದ ಸಾಕ್ಷ್ಯವು ಎಲ್ಲಾ ಕಾನೂನು ಅನುಬದ್ಧ ವಿಧಾನಗಳ ಮೂಲಕ ಸತ್ಯವನ್ನು ಪಡೆಯುವ ಮೂಲಕ ಪ್ರಕರಣದ ನ್ಯಾಯಯುತ ತೀರ್ಮಾನಕ್ಕೆ ಅಗತ್ಯವಾದ ನ್ಯಾಯಾಲಯಕ್ಕೆ ಹಾಜರುಪಡಿಸುವ ಅಧಿಕಾರವನ್ನು ಪರಿಮಿತಿಗೊಳಿಸಲಾಗಿದೆ.ಆದುದರಿಂದ, ಪ್ರಕರಣದ ನ್ಯಾಯಯುತ ತೀರ್ಮಾನಕ್ಕಾಗಿ ಸಂಬಂಧಿತ ಸಂಗತಿಗಳನ್ನು ಕಂಡುಹಿಡಿಯುವ ಅಥವಾ ಅಂತಹ ಸತ್ಯಗಳ ಸರಿಯಾದ ಪುರಾವೆಗಳನ್ನು ಪಡೆಯುವ ಉದ್ದೇಶದಿಂದ ಮಾತ್ರ ಪ್ರಕರಣದ ಸಹಾಯವನ್ನು ಪಡೆಯಬೇಕು ಮತ್ತು ಅದನ್ನು ನ್ಯಾಯಿಕವಾಗಿ ಬಳಸಬೇಕೇ ಹೊರತು ವಿಚಿತ್ರವಾಗಿ ಅಥವಾ ನಿರಂಕುಶವಾಗಿ ಅಲ್ಲ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.ಏಕೆಂದರೆ, ಅಧಿಕಾರದ ಯಾವುದೇ ಅಸಮರ್ಪಕ ಅಥವಾ ವಿಚಿತ್ರವಾದ ಚಲಾವಣೆಯು ಅನಪೇಕ್ಷಿತ ಫಲಿತಾಂಶಗಳಿಗೆ ಕಾರಣವಾಗಬಹುದು.ಮೇಲಾಗಿ, ಈ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ ನ್ಯಾಯಾಲಯವು ಸೂಕ್ತ ಎಚ್ಚರಿಕೆ ವಹಿಸಬೇಕಾದುದು ಕರ್ತವ್ಯವಾಗಿದೆ ಮತ್ತು ಪ್ರಾಸಿಕ್ಯೂಷನ್ನಿಂದ ಅಥವಾ ಪ್ರತಿವಾದದಿಂದ ಆದ ಲೋಪವನ್ನು ತುಂಬಲು ಅದನ್ನು ಬಳಸಬಾರದು ಅಥವಾ ಆರೋಪಿಯ ಅನಾನುಕೂಲಕ್ಕೆ ಅಥವಾ ಆರೋಪಿಯ ಪ್ರತಿವಾದಕ್ಕೆ ಗಂಭೀರ ಪೂರ್ವಾಗ್ರಹ ಉಂಟಾಗಲು ಅಥವಾ ವಿರುದ್ಧದ ಪಕ್ಷಕಾರರಿಗೆ ನ್ಯಾಯೋಚಿತವಲ್ಲದ ಅನುಕೂಲ ಮಾಡಿಕೊಡಲು ಅದನ್ನು ಬಳಸಕೂಡದು ಮತ್ತು ಅಷ್ಟೇ ಅಲ್ಲದೆ, ಮರುವಿಚಾರಣೆಗೆ ಅಥವಾ ಯಾರೇ ಪಕ್ಷಕಾರರ ವಿರುದ್ಧ ಪ್ರಕರಣದ ಸ್ವರೂಪವನ್ನು ಬದಲಾಯಿಸುವ ಸೋಗಿನಲ್ಲಿ ಹೆಚ್ಚುವರಿ ಸಾಕ್ಷ್ಯವನ್ನು ಸ್ವೀಕರಿಸಬಾರದು "

16. ಮೇಲೆ ಉಲ್ಲೇಖಿಸಲಾದ ರಾಜೇಂದ್ರ ಪ್ರಸಾದ್ ರವರ ಮೊಕದ್ದಮೆಯಲ್ಲಿಯೂ ಸಹ, ಸೂಕ್ತ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸುವಲ್ಲಿ ಅಥವಾ ಅಧಿವಿಚಾರಣೆ ಅವಧಿಯಲ್ಲಿ ಸಾಕ್ಷಿದಾರರಿಂದ ಸೂಕ್ತ ಉತ್ತರಗಳನ್ನು ಪಡೆಯುವಲ್ಲಿ, ಸರ್ಕಾರಿ ವಕೀಲರಿಂದ ಆಗಿರುವ ನಿರ್ಲಕ್ಷ್ಯದ ತಪ್ಪಿಗೆ ಪ್ರಾಸಿಕ್ಯೂಷನ್ನಲ್ಲಿನ ಲೋಪವನ್ನು ಸಮೀಕರಿಸಬಾರದು ಎಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಚ ' ತಪ್ಪು

ಮಾಡುವುದು ಮಾನವ ಸಹಜ ಕ್ರಿಯೆ ' ಎಂಬ ನಾಣ್ಣುಡಿಯು ಮನುಷ್ಯರು ತಪ್ಪುಗಳನ್ನು ಮಾಡುವ ಸಾಧ್ಯತೆಯನ್ನು ಸಾಬೀತುಪಡಿಸಲಾಗಿರುವುದರ ಗುರುತಾಗಿದೆ.ಮೊಕದ್ದಮೆಯನ್ನು ನಡೆಸುವ ಅವಧಿಯಲ್ಲಿನ ಅಂಥ ಯಾವುದೇ ದೋಷಗಳು ಅಥವಾ ತಪ್ಪುಗಳ ಸ್ವಾಭಾವಿಕ ಪರಿಣಾಮವನ್ನು ನ್ಯಾಯಾಲಯವು ತುಂಬಲಾರದ ಕೊರತೆಯೆಂದು ಅರ್ಥೈಸಲು ಸಾಧ್ಯವಿಲ್ಲ.ಪ್ರಾಸಿಕ್ಯೂಷನ್ನ ಕಾರ್ಯನಿರ್ವಹಣೆಯಲ್ಲಿನ ಅಜಾಗರೂಕತೆಯನ್ನು ಸರಿಪಡಿಸಲಾಗದ ಲೋಪವೆಂದು ಪರಿಗಣಿಸಲಾಗದು.ಸೂಕ್ತ ಸಾಕ್ಷ್ಯಗಳನ್ನು ಉಲ್ಲೇಖಿಸದಿದ್ದಲ್ಲಿ ಅಥವಾ ಸಂಬಂಧಪಟ್ಟ ಸಾಕ್ಷ್ಯಾಧಾರಗಳನ್ನು ದಾಖಲೆಗಳಲ್ಲಿ ಹಾಜರುಪಡಿಸದಿದ್ದಲ್ಲಿ, ನ್ಯಾಯಾಲಯವು ಅಂತಹ ತಪ್ಪುಗಳನ್ನು ಸರಿಪಡಿಸಲು ಅನುಮತಿ ನೀಡುವ ಔದಾರ್ಯ ತೋರಬೇಕು.ಏನೇ ಆದರೂ, ಕ್ರಿಮಿನಲ್ ನ್ಯಾಯಾಲಯದ ಕರ್ತವ್ಯವು ಕ್ರಿಮಿನಲ್ ನ್ಯಾಯದ ಕಾರ್ಯ ನಿರ್ವಹಣೆಯಾಗಿದೆಯೇ ಹೊರತು, ಪಕ್ಷಕಾರರು ಮಾಡಿದ ದೋಷಗಳನ್ನು ಎಣಿಸುವುದಲ್ಲ ಅಥವಾ ಪಕ್ಷಕಾರರಲ್ಲಿ ಯಾರು ಉತ್ತಮವಾಗಿ ಕಾರ್ಯ ನಿರ್ವಹಿಸಿದರೆಂಬುದನ್ನು ಕಂಡುಹಿಡಿದು ಘೋಷಿಸುವುದೂ ಅಲ್ಲ.

17. ಪ್ರಸ್ತುತ ಮೊಕದ್ದಮೆಯಲ್ಲಿ, ' ಸಿಆರ್‌ಪಿಸಿ ' ಯ 311 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಪ್ರಾಸಿಕ್ಯೂಷನ್ ಆಗಲೀ ಅಥವಾ ಪ್ರತಿವಾದಿಯಾಗಲೀ ಅಲ್ಲ. ಆದರೆ, ತಪ್ಪನ್ನು ಸ್ವತಃ ಗಮನಿಸಿದ್ದು ಮಾನ್ಯ ಸೆಷನ್ಸ್ ನ್ಯಾಯಾಧೀಶರಾಗಿದ್ದು, ಅವರು ' ಸಿಆರ್‌ಪಿಸಿ ' ಯ 311 ನೇ ಪ್ರಕರಣದ ಅಡಿಯಲ್ಲಿ ಸ್ವ-ಪ್ರೇರಣೆಯಿಂದ ಅಧಿಕಾರವನ್ನು ಚಲಾಯಿಸಿದ್ದಾರೆ ಮತ್ತು ಡಿಎನ್‌ಎ ವರದಿಯನ್ನು ಹಾಜರುಪಡಿಸುವ ಮತ್ತು ಗುರುತಿಸುವ ಉದ್ದೇಶಕ್ಕಾಗಿ ಮಾತ್ರವೇ ಪಿ.ಡಬ್ಲ್ಯು .30 ಕ್ಕೆ ಸಮನ್ಸ್ ಹೊರಡಿಸಿದ್ದಾರೆ.ಮಾನ್ಯ ಸೆಷನ್ಸ್ ನ್ಯಾಯಾಧೀಶರು ಗಮನಿಸಿರುವಂತೆ, ಪಿ.ಡಬ್ಲ್ಯು .30 ರ ಸಾಕ್ಷ್ಯವನ್ನು ಸದರಿ ಉದ್ದೇಶಕ್ಕಾಗಿ ಮುಂದೂಡಲಾಗಿತ್ತು.ಆದರೆ, ತರುವಾಯ, ಇತರ ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದಾಗ್ಯೂ, ನ್ಯಾಯಾಲಯವು ಅವರನ್ನು ಮತ್ತೆ ಕರೆಸಲು ಮತ್ತು ಡಿಎನ್‌ಎ ವರದಿಯನ್ನು ಗುರುತು ಮಾಡಲು ವಿಫಲವಾಗಿದ್ದು, ನ್ಯಾಯಾಲಯದ ಪ್ರಕಾರ, ಪ್ರಕರಣದಲ್ಲಿ ನ್ಯಾಯೋಚಿತ ತೀರ್ಮಾನದ ಉದ್ದೇಶಕ್ಕಾಗಿ ಅದು ಅತ್ಯವಶ್ಯಕವಾಗಿತ್ತು.ಮಾನ್ಯ ಸೆಷನ್ಸ್ ನ್ಯಾಯಾಧೀಶರು ಹಾಗೆ ಅಧಿಕಾರ ಚಲಾಯಿಸಿರುವುದನ್ನು ಪ್ರಾಸಿಕ್ಯೂಷನ್ ಪ್ರಕರಣದಲ್ಲಿನ ಲೋಪವನ್ನು ಸರಿದೂಗುವ ಪ್ರಯತ್ನವೆಂದು ಅರ್ಥೈಸಲು ಸಾಧ್ಯವಿಲ್ಲ. 'ಸಿಆರ್‌ಪಿಸಿ'ಯ 311 ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ಚಲಾವಣೆಯು ಪ್ರಕರಣದ ನ್ಯಾಯೋಚಿತ ತೀರ್ಮಾನಕ್ಕಾಗಿ ಇರುವುದಾಗಿದೆ.ಈ ಸನ್ನಿವೇಶಗಳ ಅಡಿಯಲ್ಲಿ, ಮಾನ್ಯ ಸೆಷನ್ಸ್ ನ್ಯಾಯಾಧೀಶರು ಹೊರಡಿಸಿದ ಪ್ರಶ್ನಿತ ಆದೇಶವು ಕಾನೂನು ಪ್ರಕಾರ ಸರಿಯಿದೆ ಮತ್ತು ಅದು ಈ ನ್ಯಾಯಾಲಯದ ಯಾವುದೇ ಹಸ್ತಕ್ಷೇಪವನ್ನು ಅಪೇಕ್ಷಿಸುವುದಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ.ತದನುಸಾರವಾಗಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸಲು ಮುಂದಾಗಿದ್ದೇನೆ:

ಅರ್ಜಿಯನ್ನು ವಜಾ ಮಾಡಲಾಗಿದೆ.